ಇಬ್ಬರನ್ನೂ ಸಮಾನ ದೃಷ್ಟಿಯಿಂದ ನೋಡತಕ್ಕಂಥ ಅಧ್ಯಕ್ಷರಿಗೆ ಅಗೌರವ ತೋರಿಸತಕ್ಕಂಥ ರೀತಿಯಲ್ಲಿ ಮಾತನಾಡುವುದೇ ಆದರೆ ಇವರಿಗೆ ಏನು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಇವರು ರೈತರ ಹಕ್ಕುಗಳನ್ನು ಮೊಟಕುಗೊಳಿಸುತ್ತಿದ್ದಾರೆ, ರೈತರನ್ನು ಸಾಯಿಸುತ್ತಿದ್ದಾರೆ. ಅವರು ಹಸಿವಿನಿಂದ ಸಾಯುತ್ತಿದ್ದಾರೆ.

ಅಧ್ಯಕ್ಷರು : ನಾಳೆ ಮತ್ತೆ ಒಂದೈದು ಜನ ಎದು ಇವರ ಬಗ್ಗೆ ಮಾತನಾಡಿದರೆ ಈ ವಿಷಯವನ್ನು ಮತ್ತೆ ತೆಗೆದುಕೊಳ್ಳಬೇಕೇ? ಏನಿದು? ನೀವು ನಿನ್ನೆ ಮತನಾಡಬಹುದಿತ್ತು. ಚಂದ್ರೇಗೌಡರೇ, ನೀವು ಹೇಳಿ.

ಗೊಂದಲ

ಅಧ್ಯಕ್ಷರು : ಇದು ನಿಲುವಳಿ ಸೂಚನೆ ಅಲ್ಲ ನೀವ್ಯಾರೂ ನಿಲುವಳಿ ಸೂಚನೆ ಕೊಟ್ಟಿಲ್ಲ. ನೀವು ಎತ್ತುತ್ತಿರುವುದು ಶೂನ್ಯವೇಳೆಯಲ್ಲಿ.

5. ಅಧ್ಯಕ್ಷರ ತೀರ್ಪು

'ಧರಣಿ ನಿರತರಾಗಿ ಸದನದ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದ ಬಿ.ಜೆ.ಪಿ ಸದಸ್ಯರನ್ನು ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಮತ್ತು ನಿಯಮ 347ರ ಪ್ರಕಾರ ಸದನದಿಂದ ಹೊರಗೆ ಕಳುಹಿಸುವುದರ ಬಗ್ಗೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು-ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ 347ನೇ ನಿಯಮದ ಪ್ರಕಾರ "ಅಧ್ಯಕ್ಷರು ಯಾವ ಸದಸ್ಯರ ನಡವಳಿಕೆಯು ತುಂಬಾ ಅಸಭ್ಯವಾಗಿದೆಯೆಂದು ಭಾವಿಸುತ್ತಾರೋ, ಅಂಥ ಸದಸ್ಯರಿಗೆ ಸದನದಿಂದ ಕೂಡಲೇ ಹೊರಗೆ ಹೋಗುವಂತೆ ಆದೇಶಿಸಬಹುದು ಮತ್ತು ಆ ರೀತಿ ಹೋಗಬೇಕೆಂದು ಆದೇಶ ಮಾಡಿದ ಯಾರೇ ಸದಸ್ಯರು ಕೂಡಲೇ ಸಭೆಯಿಂದ ಹೊರಗೆ ಹೋಗಬೇಕು ಮತ್ತು ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಅವರು ಗೈರು ಹಾಜರಾಗತಕ್ಕದ್ದು" ಎಂದು ಇದೆ. ಅದರಂತೆ ತಾವು 347 ನೇ ವಿಧಿಯಂತೆ ಅವರನ್ನು ಹೊರಗೆ ಹೋಗುವಂತೆ ಆಜ್ಞೆ ಮಾಡಬೇಕು. ಅದನ್ನು ಪಾಲನೆ ಮಾಡದಿದ್ದರೆ.....

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಸಭೆಯನ್ನು ಈ ರೀತಿ ನಡೆಸಲು ಸಾಧ್ಯವಿಲ್ಲ. ಇದು ದಬ್ಬಾಳಿಕೆಯಾಗುತ್ತದೆ, ಇದು ಗೂಂಡಾಗಿರಿಯಾಗುತ್ತದೆ. ಈ ರೀತಿಯ ಕೆಲವೇ ಜನರ ದಬ್ಬಾಳಿಕೆಗೆ ತಾವು ಮಣಿಯಬಾರದು ಎಂದು ನಾನು ತಮ್ಮಲ್ಲಿ ಮನವಿ ಮಾಡಿ 347 ನೇ ನಿಯಮದ ಪ್ರಕಾರ ಅವರನ್ನು ಪೆಸರಿಸಿ ಹೊರಗೆ ಕಳುಹಿಸಬೇಕೆಂದು ಹೇಳುತ್ತಿದ್ದೇನೆ

ಅಧ್ಯಕ್ಷರು : 347ನೇ ನಿಯಮದ ಪ್ರಕಾರ ಸದಸ್ಯರನ್ನು ಸಭೆಯ ಹೊರಗೆ ಕಳುಹಿಸಬೇಕೆಂದು ಮಾನ್ಯ ಸಂಸದೀಯ ಸಚಿವರು ಹೇಳಿರುವುದರಿಂದ "ಯಾವ ಸದಸ್ಯರ ನಡವಳಿಕೆಯು ತುಂಬಾ ಅಸಭ್ಯವಾಗಿದೆಯೆಂದು ಭಾವಿಸುತ್ತಾರೋ" ಅಂಥ ಸದಸ್ಯರಿಗೆ ಸದನದಿಂದ ಕೂಡಲೇ ಹೊರಗೆ ಹೋಗುವಂತೆ ಆದೇಶಿಸಬಹುಮ ಮತ್ತು ಆ ರೀತಿ ಹೋಗಬೇಕೆಂದು ಆದೇಶ ಮಾಡಿದ ಯಾರೇ ಸದಸ್ಯರು ಕೂಡಲೇ ಸಭೆಯಿಂದ ಹೊರಗೆ ಹೋಗಬೆಕು ಮತ್ತು ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಅವರು ಗೈರು ಹಾಜರಾಗತಕ್ಕದ್ದು ಅಂದರೆ ಇದು ಇವತ್ತಿಗೆ ಮಾತ್ರ ಅನ್ವಯವಾಗುತ್ತದೆ. ನಾನು ಈಗ 347ನೇ ನಿಯಮಾವಳಿಯನ್ನು ಉಪಯೋಗಿಸುತ್ತಿದ್ದೇನೆ. ದಯವಿಟ್ಟು ಈ ಕೆಳಕಂಡ ಮಾನ್ಯ ಸದಸ್ಯರು ಹೊರಗೆ ಹೋಗಬೇಕು:-

ಶ್ರೀಯುತರುಗಳಾದ :
ಜಗದೀಶ್ ಶೆಟ್ಟರ್
ರಾಜೇಂದ್ರ ವರ್ಮಾ
ಪಿ.ಹೆಚ್. ಪೂಜಾರ್
ಕಟ್ಟಾ ಸುಬ್ರಹ್ಮಣ್ಯ ನಾಯ್ಡು
ರಮೇಶ್ ಪಿ.
ಡಿ.ವಿ. ಸದಾನಂದಗೌಡ
ವಿಶ್ವೇಶ್ವರ ಹೆಗಡೆ ಕಾಗೇರಿ
ಎಸ್. ಸುರೇಶ್ ಕುಮರ್
ಎಂ.ಡಿ. ಲಕ್ಷ್ಮೀನಾರಾಯಣ
ಎನ್. ಯೋಗೀಶ್ ಭಟ್
ಚಿಕ್ಕನಗೌಡ್ರ
ಪ್ರಭಾಕರ ಬಂಗೇರ
ಪಿ.ಸಿ. ಮೋಹನ್
ಎಸ್.ಎ. ರವೀಂದ್ರನಾಥ್
ಕೆ.ಎನ್. ಸುಬ್ಬಾರೆಡ್ಡಿ
ರೇವುನಾಯಕ್ ಬೆಳಮಗಿ

ಬಸವರಾಜ ಮಂಡಿಮಠ್ , ಪ್ರಕಾಶ ಖಂಡ್ರೆ, ವಿವೇಕಾನಂದ ವೈದ್ಯ, ಎಸ್. ಅಂಗಾರ, ಹಾಲಾಡಿ ಶ್ರೀನಿವಾಸ ಶೆಟ್ಟರು, ಚಂದ್ರಕಾಂತ ಜಿ. ಬೆಲ್ಲದ್, ಆರ್. ಅಶೋಕ್.

347ನೇ ವಿಧಿಯ ಪ್ರಕಾರ ಮಾನ್ಯ ಮಂತ್ರಿಗಳು ನಿಮ್ಮನ್ನು ಹೆಸರಿಸಿರುವುದರಿಂದ ದಯವಿಟ್ಟು ಒಬ್ಬೊಬ್ಬರಾಗಿ ಸದನದಿಂದ ಹೊರಗೆ ಹೋಗಿ ಇವತ್ತು ಸಂಜೆಯವರೆಗೆ ನೀವು ಸದನಕ್ಕೆ ಬರುವಹಾಗಿಲ್ಲ. ದಯವಿಟ್ಟು ಹೊರಗೆ ಹೋಗಬೇಕು.

ಗೊಂದಲ

6. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಿಯಮ 347ರ ಪ್ರಕಾರ ವಿರೋಧ ಪಕ್ಷದವರಿಂದ ಆಕ್ಷೇಪ ಮಾನ್ಯ ಸದಸ್ಯರನ್ನು ಅಮಾನತ್ತುಪಡಿಸಿದ್ದಕ್ಕೆ ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಇದೇ ಮೊದಲನೆ ಬಾರಿ ಶಾಸನಸಭೆಯ ಗೌರವಾನ್ವಿತ ಅಧ್ಯಕ್ಷರ ತೀರ್ಪಿನ ವಿರುದ್ಧ ಮೊಂಡುತನ ಮಾಡಿದಂಥದ್ದೂ ಸಹ ಇದು ಮೊದಲನೇ ಸಲ. ಇಂಥ ವಿಚಾರಗಳಲ್ಲಿ ಚರ್ಚೆಗೆ ಸರ್ಕಾರ ಎಂದೂ ಪ್ರತಿರೋಧ ಮಾಡಿಲ್ಲ. ತಾವೂ ಕೂಡ ಎಲ್ಲಾ ಸಂದರ್ಭಗಳಲ್ಲೂ ಗೌರವಾನ್ವಿತ ಸದಸ್ಯರುಗಳ ಇಚ್ಛೆಗನುಸಾರವಾಗಿ ತಾವು ಇಲ್ಲಿ ನಡೆದುಕೊಂಡಿದ್ದೀರಿ. ಅದನ್ನು ಉಳಿಸಿಕೊಳ್ಳುವುದು ಅವರಿಗೆ ಸೇರಿದ ವಿಚಾರ. ಇದು ನಿಜವಾಗಿಯೂ ಸೋವಿನ ಸಂಗತಿಯಾಗಿದೆ. ಪ್ರತಿಪಕ್ಷಗಳನ್ನು ಹೊರಗೆ ಹಾಕಿ ಸದನ ನಡೆಸಬೇಕೆನ್ನುವಂಥದ್ದು ನಮ್ಮ ಉದ್ದೇಶವಲ್ಲ. ಆದರೆ ಸರ್ಕಾರ ಚರ್ಚೆ ಮಾಡುವುದಕ್ಕೆ ಸಿದ್ಧವಿದೆಯೆಂದು ಹೇಳಿದರೂ, ಈ ರೂಪದಲ್ಲಿ